KAMD020026902024

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.ರವರ ನ್ಯಾಯಾಲಯ, ಮಂಡ್ಯ

ದಿನಾಂಕಃ 28 ನೇ ಫೆಬ್ರವರಿ ಮಾಹೆ 2026

ಉಪಸ್ಥಿತರುಃ
ಶ್ರೀಮತಿ ಕೆ.ಲಕ್ಷ್ಮಿ, ಬಿ.ಎ.ಎಲ್., ಎಲ್.ಎಲ್.ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,
ಮಂಡ್ಯ.

ಸಿ.ಸಿ.ಸಂಖ್ಯೆ1134/2024

| | |
|---|---|
| ಪಿರ್ಯಾದುದಾರರು | ರಾಜ್ಯದ ಪರವಾಗಿ ಕೆರಗೋಡು ಪೊಲೀಸ್ |
| ವಿರುದ್ಧ | |
| ಆಪಾದಿತರು | ಅವಿನಾಶ್ ಬಿನ್ ರಾಜೇಗೌಡ ,<br>ವಯಸ್ಸು ಃ 26 ವರ್ಷ,<br>ಹಲ್ಲೇಗೆರೆ ಗ್ರಾಮ, ಬಸರಾಳು ಹೋಬಳಿ,<br>ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ. |

| | |
|---|---|
| ಅಪರಾಧವಾದ ದಿನಾಂಕ | 22.10.2023 |
| ಪ್ರಕರಣ ವರದಿಯಾದ ದಿನಾಂಕ | 23.10.2023 |
| ಸಾಕ್ಷಿ ವಿಚಾರಣೆ ಶುರುವಾದ ದಿನಾಂಕ | 27.02.2026 |
| ಅಪರಾಧ ಕಲಂಗಳು | ಭಾ.ದಂ.ಸಂ. ಕಲಂ 504, 324, 326, 506. |
| ಪಿರ್ಯಾದಿಯನ್ನು ಪ್ರತಿನಿಧಿಸುವವರು | ಸಹಾಯಕ ಸರ್ಕಾರಿ ಅಭಿಯೋಜಕರು |
| ಆಪಾದಿತರನ್ನು ಪ್ರತಿನಿಧಿಸುವವರು | ಶ್ರೀ ಎಸ್.ಕೆ.ಎಂ.ಎಸ್ , ವಕೀಲರು |
| ತೀರ್ಪಿನ ದಿನಾಂಕ | 28.02.2026 |
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರನ್ನು ಆರೋಪಣೆಗಳಿಂದ ಖುಲಾಸೆ ಮಾಡಲಾಗಿದೆ |

## ತೀರ್ಪು

ಕೆರಗೋಡು ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆಪಾದಿತರ ವಿರುದ್ದ ದಾಖಲು ಮಾಡಿ, ಆಪಾದಿತರು ಭಾರತೀಯ ದಂಡ ಸಂಹಿತೆ ಕಲಂ.504, 324, 326, 506 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

2. ಈ ಕೇಸಿನ ಸಂಗತಿಗಳು ಸಂಕ್ಷಿಪ್ತವಾಗಿ ಈ ಕೆಳಕಂಡಂತೆ ಇರುತ್ತವೆ.

ದಿನಾಂಕ:- 21-10-2023 ರಂದು ಸಾಕ್ಷಿ-04 ರವರ ತಂದೆ ತಾಯಿ ರವರಿಗೂ ಸಾಕ್ಷಿ-01 ರವರಿಗೂ ಮಾತಿಗೆ ಮಾತು ನಡೆದಿದ್ದು ಇದೇ ವಿಚಾರದಲ್ಲಿ ಆಪಾದಿತರು ಸಾಕ್ಷಿ-01 ರವರ ಮೇಲೆ ದ್ವೇಷ ಇಟ್ಟಿಕೊಂಡಿದ್ದು ದಿನಾಂಕ 22-10-2023 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ಸಾಕ್ಷಿ 01, ಸಾಕ್ಷಿ-02, ಸಾಕ್ಷಿ-

03 ರವರು ಲೈಟಿಂಗ್ ಮತ್ತು ವೈರಿಂಗ್ ಕೆಲಸ ಮುಗಿಸಿಕೊಂಡು ಮಾರಗೌಡನಹಳ್ಳಿ ಗ್ರಾಮದ ಅಂಗಡಿ ಬಳಿಗೆ ಬಂದಾಗ ಅಲ್ಲಿಗೆ ಆಪಾದಿತನು ಕೆಎ 04 /ಎ.ಎ 2134 ಸಿಫ್ಟ್ ಡಿಜೈರ್ ಕಾರಿನಲ್ಲಿ ಬಂದು ಸಾಕ್ಷಿ-01 ರವರ ಅಂಗಡಿಯಲ್ಲಿದ್ದ 2 ಬಿಳಿಯ ಬಣ್ಣದ ವೈರನ್ನು ತೆಗೆದುಕೊಂಡು ಸಾಕ್ಷಿ-01 ರವರ ಮೈ ಮೇಲೆ ಹೊಡೆದಿದ್ದು, ನಂತರ ಆಪಾದಿತರು ತಂದಿದ್ದ ಎ.ಕೆ. 04/ಎ.ಎ.2134 ಸಿಫ್ಟ್ ಡಿಜೈರ್ ಕಾರಿನ ಡಿಕ್ಕಿಯಲ್ಲಿ ಇಟ್ಟಿದ್ದ ಒಂದು ಹಾಕಿ ಸ್ಟಿಕ್ ತೆಗೆದುಕೊಂಡು ಬಂದು ಸಾಕ್ಷಿ-01 ರವರಿಗೆ ಆಪಾದಿತರು ಅವಾಚ್ಯವಾಗಿ ನಿಂದಿಸುತ್ತಾ ನಿನಗೆ ಸರಿಯಾಗಿ ಬುದ್ದಿ ಕಲಿಸುತ್ತೇನೆ ನೋಡು' ಎಂದು ಸಾಕ್ಷಿ-01 ರವರ ಎಡಗೈ ಮೇಲೆ, ತಲೆ ಮೇಲೆ, ಹಾಕಿ ಸ್ಟಿಕ್ ನಿಂದ ಹೊಡೆದಿದ್ದು, ನಂತರ ಆಪಾದಿತನು ತಾನು ತಂದಿದ್ದ ಎ.ಕೆ. 04 /ಎ.ಎ. 2134 ಸಿಫ್ಟ್ ಡಿಜೈರ್ ಕಾರಿನಲ್ಲಿ ಹೊರಟು ಹೋಗಿದ್ದು, ಸಾಕ್ಷಿ-01 ರವರಿಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳಾದ ಸಾಕ್ಷಿ-11 ರವರು ಗಾಯಾಳು ಸಾಕ್ಷಿ-01 ರವರಿಗೆ ಆಗಿರುವ ಗಾಯಗಳ ಪೈಕಿ ಒಂದು ಗಾಯವು ತೀವ್ರ ಸ್ವರೂಪದ ಗಾಯವೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ ಎಂಬುದಾಗಿರುತ್ತದೆ. ನಂತರ ಫಿರ್ಯಾದುದಾರರಾದ ಸಾಕ್ಷಿ -1 ರವರು ಮರು ದಿನ ಅಂದರೆ ದಿ ಃ 23.10.2023 ರಂದು ಸಂಜೆ 4.30 ಗಂಟೆಯ ಸಮಯದಲ್ಲಿ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ದಾಖಲು ಮಾಡಿರುತ್ತಾರೆ. ಚಾಸಾ.18 ರವರು ದೂರನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಭಾಗಶಃ ತನಿಖೆ ನಡೆಸಿದ್ದು ನಂತರ ಮುಂದಿನ

ತನಿಖೆಗಾಗಿ ಚಾಸಾ.19 ರವರಿಗೆ ವರ್ಗಾಯಿಸಿರುತ್ತಾರೆ. ಚಾಸಾ.19 ರವರು ಕೇಸಿನ ಕಡತವನ್ನು ಪರಿಶೀಲಿಸಿ ತನಿಖೆ ಮುಂದುವರೆಸಿ ಆನಂತರ ಆಪಾದಿತರ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ ಆಪಾದಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಲಾಗಿರುತ್ತದೆ.

3. ಆಪಾದಿತರು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

4. ನಂತರ ಈ ಪ್ರಕರಣವನ್ನು ಸಾಕ್ಷಿಗಳ ವಿಚಾರಣೆಗೆ ಮುಂದೂಡಲಾಗಿದ್ದು, ಅಭಿಯೋಜನೆ ಪರ ಫಿರ್ಯಾದುದಾರರನ್ನು ಫ್ರಾಸಾ.1 ರವರನ್ನಾಗಿ ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ಮತ್ತು 2 ನ್ನು ಗುರುತಿಸಲಾಗಿರುತ್ತದೆ. ಆಪಾದಿತರ ವಿರುದ್ಧ ಯಾವುದೇ ಸಾಕ್ಷಿ ಕಂಡು ಬಂದಿಲ್ಲದಿರುವುದರಿಂದ ದಂ.ಪ್ರ.ಸಂ. ಕಲಂ. 313 ರ ಅಡಿಯಲ್ಲಿನ ವಿಚಾರಣೆಯನ್ನು ಕೈಬಿಡಲಾಯಿತು.

5. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ತೀರ್ಮಾನಕ್ಕೆ ಉದ್ಭವಿಸುತ್ತದೆ.

1. ದಿನಾಂಕಃ 22.10.2023 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ಸಾಕ್ಷಿ-1 ರವರು ತಮ್ಮ ಅಂಗಡಿಯಲ್ಲಿ ಇರುವಾಗ ಆಪಾದಿತರು ಸಾಕ್ಷಿ-1 ರವರನ್ನು ಸಾರ್ವಜನಿಕವಾಗಿಅವಾಚ್ಯ ಶಬ್ದಗಳಿಂದ ನಿಂದಿಸಿ ಭಾ.ದಂ.ಸಂ. ಕಲಂ 504 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?

2. ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆಪಾದಿತರು ಸಾಕ್ಷಿ-1 ರವರಿಗೆ ಬಿಳಿ ಬಣ್ಣದ ವೈರಿನಿಂದ ವೈಮೇಲೆ ಹೊಡೆದ್ದು, ಸಾಮಾನ್ಯ ಸ್ವರೂಪದ ಗಾಯಗಳನ್ನು ಉಂಟು ಮಾಡಿ, ಭಾ.ದಂ.ಸಂ. ಕಲಂ 324 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?
3. ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆಪಾದಿತರಾದ ನೀವು ಸಾಕ್ಷಿ-1 ರವರಿಗೆ ಒಂದು ಹಾಕಿಸ್ಟಿಕ್ ನಿಂದ ಎಡಗೈ ಮೇಲೆ ಮತ್ತು ತಲೆ ಮೇಲೆ ಹೊಡೆದ್ದು, ತೀವ್ರ ಸ್ವರೂಪದ ಗಾಯಗಳನ್ನು ಉಂಟು ಮಾಡಿ, ಭಾ.ದಂ.ಸಂ. ಕಲಂ 326 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?
4. ಯಾವ ಆದೇಶ?

6. ಮೇಲಿನ ಅಂಶಗಳಿಗೆ ನಾನು ಕೆಳಗೆ ನೀಡಿರುವ ಕಾರಣಗಳಿಂದಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ರಿಂದ 3 :- ನಕರಾತ್ಮಕವಾಗಿ

ಅಂಶ 4 :- ಅಂತಿಮ ಆದೇಶದಂತೆ

## ಕಾ ರ ಣ ಗ ಳು

7. ಅಂಶ-1 ರಿಂದ 3:- ಸದರಿ ಮೂರೂ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಅಪರಾಧವಾದ ಕಾರಣ ಹಾಗೂ ಅವುಗಳಿಗೆ ನೀಡಲಾಗುವ ಕಾರಣಗಳು

ಪುನಾರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ನಾಲ್ಕೂ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿರುತ್ತದೆ.

8. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, ದಿನಾಂಕ:- 21-10-2023 ರಂದು ಸಾಕ್ಷಿ-04 ರವರ ತಂದೆ ತಾಯಿ ರವರಿಗೂ ಸಾಕ್ಷಿ-01 ರವರಿಗೂ ಮಾತಿಗೆ ಮಾತು ನಡೆದಿದ್ದು ಇದೇ ವಿಚಾರದಲ್ಲಿ ಆಪಾದಿತರು ಸಾಕ್ಷಿ-01 ರವರ ಮೇಲೆ ದ್ವೇಷ ಇಟ್ಟಿಕೊಂಡಿದ್ದು ದಿನಾಂಕ 22-10-2023 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ಸಾಕ್ಷಿ 01, ಸಾಕ್ಷಿ-02, ಸಾಕ್ಷಿ-03 ರವರು ಲೈಟಿಂಗ್ ಮತ್ತು ವೈರಿಂಗ್ ಕೆಲಸ ಮುಗಿಸಿಕೊಂಡು ಮಾರಗೌಡನಹಳ್ಳಿ ಗ್ರಾಮದ ಅಂಗಡಿ ಬಳಿಗೆ ಬಂದಾಗ ಅಲ್ಲಿಗೆ ಆಪಾದಿತನು ಕೆಎ 04 /ಎ.ಎ 2134 ಸಿಫ್ಟ್ ಡಿಜೈರ್ ಕಾರಿನಲ್ಲಿ ಬಂದು ಸಾಕ್ಷಿ-01 ರವರ ಅಂಗಡಿಯಲ್ಲಿದ್ದ 2 ಬಿಳಿಯ ಬಣ್ಣದ ವೈರನ್ನು ತೆಗೆದುಕೊಂಡು ಸಾಕ್ಷಿ-01 ರವರ ಮೈ ಮೇಲೆ ಹೊಡೆದಿದ್ದು, ನಂತರ ಆಪಾದಿತರು ತಂದಿದ್ದ ಎ.ಕೆ. 04/ಎ.ಎ.2134 ಸಿಫ್ಟ್ ಡಿಜೈರ್ ಕಾರಿನ ಡಿಕ್ಕಿಯಲ್ಲಿ ಇಟ್ಟಿದ್ದ ಒಂದು ಹಾಕಿ ಸ್ಟಿಕ್ ತೆಗೆದುಕೊಂಡು ಬಂದು ಸಾಕ್ಷಿ-01 ರವರಿಗೆ ಆಪಾದಿತರು ಅವಾಚ್ಯವಾಗಿ ನಿಂದಿಸುತ್ತಾ ನಿನಗೆ ಸರಿಯಾಗಿ ಬುದ್ಧಿ ಕಲಿಸುತ್ತೇನೆ ನೋಡು' ಎಂದು ಸಾಕ್ಷಿ-01 ರವರ ಎಡಗೈ ಮೇಲೆ, ತಲೆ ಮೇಲೆ, ಹಾಕಿ ಸ್ಟಿಕ್ ನಿಂದ ಹೊಡೆದಿದ್ದು, ನಂತರ ಆಪಾದಿತನು ತಾನು ತಂದಿದ್ದ ಎ.ಕೆ. 04 /ಎ.ಎ. 2134 ಸಿಫ್ಟ್ ಡಿಜೈರ್ ಕಾರಿನಲ್ಲಿ ಹೊರಟು ಹೋಗಿದ್ದು, ಸಾಕ್ಷಿ-01 ರವರಿಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳಾದ ಸಾಕ್ಷಿ-11 ರವರು ಗಾಯಾಳು ಸಾಕ್ಷಿ-01 ರವರಿಗೆ ಆಗಿರುವ ಗಾಯಗಳ ಪೈಕಿ ಒಂದು

ಗಾಯವು ತೀವ್ರ ಸ್ವರೂಪದ ಗಾಯವೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ, ನಂತರ ಫಿರ್ಯಾದುದಾರರಾದ ಸಾಕ್ಷಿ-1 ರವರು ಮರು ದಿನ ಅಂದರೆ ದಿ ಃ 23.10.2023 ರಂದು ಸಂಜೆ 4.30 ಗಂಟೆಯ ಸಮಯದಲ್ಲಿ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ದಾಖಲು ಮಾಡಿರುತ್ತಾರೆ. ಚಾಸಾ.18 ರವರು ದೂರನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಭಾಗಶಃ ತನಿಖೆ ನಡೆಸಿದ್ದು ನಂತರ ಮುಂದಿನ ತನಿಖೆಗಾಗಿ ಚಾಸಾ.19 ರವರಿಗೆ ವರ್ಗಾಯಿಸಿರುತ್ತಾರೆ. ಚಾಸಾ.19 ರವರು ಕೇಸಿನ ಕಡತವನ್ನು ಪರಿಶೀಲಿಸಿ ತನಿಖೆ ಮುಂದುವರೆಸಿ ಆನಂತರ ಆಪಾದಿತರ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ ಆಪಾದಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಲಾಗಿರುತ್ತದೆ. ಆದ ಕಾರಣ, ಆಪಾದಿತರಿಗೆ ತಕ್ಕ ಶಿಕ್ಷೆ ಹಾಗೂ ದಂಡ ವಿಧಿಸಬೇಕಾಗಿ ಕೇಳಿಕೊಂಡಿರುತ್ತಾರೆ.

9. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ದಿನಾಂಕ 27.02.2026 ರಂದು ಪಿರ್ಯಾದುದಾರರಾದ ಚಾಸಾ.1 ರವರನ್ನು ಫ್ರಾಸಾ.1 ಎಂದು ಮುಖ್ಯ ವಿಚಾರಣೆ ಮಾಡಲಾಗಿ, ಫ್ರಾಸಾ-1 ರವರು ನಿಪಿ-1 ಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೇ ತಮ್ಮ ಸಾಕ್ಷ್ಯದಲ್ಲಿ ತನ್ನ ಮತ್ತು ಆಪಾದಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ, ಗಲಾಟೆ ಮಾಡಿರುತ್ತಾರೆ ಎಂದು ಅವರ ವಿರುದ್ಧ ದೂರನ್ನು ದಾಖಲು ಮಾಡಿರುವುದಿಲ್ಲ, ಆಪಾದಿತರು ಕೆಟ್ಟ ಶಬ್ದಗಳಿಂದ ಬೈದಿರುವುದಿಲ್ಲ, ಆಪಾದಿತರು ತನಗೆ ಕೈ, ಹಾಕಿ ಸ್ಟಿಕ್ ಮತ್ತು ವೈರ್ ನಿಂದ ಹಲ್ಲೆ ಮಾಡಿರುವುದಿಲ್ಲ, ಆಪಾದಿತರು ಕೊಲೆ ಬೆಧರಿಕೆ ಹಾಕಿರುವುದಿಲ್ಲ, ಪೊಲೀಸಿನವರು ತನ್ನ ಮುಂದೆ

ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಹಾಗೂ ಪೊಲೀಸ್ ನವರು ಸಹಿ ಮಾಡಿ ಎಂದು ಹೇಳಿದ ಕಾರಣ ತಾನು ಸಹಿ ಮಾಡಿರುತ್ತೇನೆ ಎಂದು ಅಭಿಯೋಜನೆಗೆ ಪೂರಕವಾದ ಸಾಕ್ಷ್ಯವನ್ನು ನುಡಿಯದೆ, ವ್ಯತಿರಿಕ್ತ ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಸಾಕ್ಷಿದಾರರನ್ನು ಪ್ರತಿಕೂಾಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಸಹಾ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಈ ಸಾಕ್ಷೀದಾರರಿಂದ ಅಭಿಯೊೀಜನೆಯವರು ಹೊರತಂದಿರುವುದಿಲ್ಲ. ಅಲ್ಲದೆ ಫಿರ್ಯಾದುದಾರರು/ನೊಂದವ್ಯಕ್ತಿಗಳೇ ತಮಗೆ ಯಾವುದೇ ತೊಂದರೆ ಆಗಿರುವುದಿಲ್ಲ ಎಂದ ಹೇಳಿದ ಕಾರಣ ಅಭಿಯೋಜನೆಯವರು ಪ್ರತ್ಯಕ್ಷದರ್ಶಿಗಳನ್ನು, ಮಹಜರು ಸಾಕ್ಷೀದಾರರನ್ನು ಮತ್ತು ತನಿಖಾಧಿಕಾರಿಗಳನ್ನು ವಿಚಾರಣೆ ಮಾಡುವ ಪ್ರಮಯವೇ ಬರುವುದಿಲ್ಲ ಹಾಗೂ ತಮ್ಮ ಪಾಟೀ ಸವಾಲಿನಲ್ಲಿ ತಾವು ಆಪಾದಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇವೆ ಎಂದು ಒಪ್ಪಿರುತ್ತಾರೆ. ಮೇಲೆ ಹೇಳಿದ ಕಾರಣಗಳಿಂದ ಈ ಪ್ರಕರಣವನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದಕಾರಣ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

10. ಅಂಶ-4:- ಮೇಲೆ ಚರ್ಚಿಸಿ ಬಂದ ನಿರ್ಣಯದಂತೆ ಕೆಳಕಂಡಂತೆ ಅಂತಿಮ ಆದೇಶ ಮಾಡಲಾಗಿದೆ.

## ಆದೇಶ

ಆಪಾದಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ಅಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ

ಕಲಂ. 504, 324, 326 ರಡಿಯ ಆರೋಪಣೆಗಳಿಂದ ಖುಲಾಸೆ ಮಾಡಲಾಗಿದೆ.

ಜಾಮೀನುದಾರರನ್ನು ಮತ್ತು ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲು ಆದೇಶಿಸಿದೆ.

ಮಾಲು ಪಟ್ಟಿ ಸಂಖ್ಯೆ 109/2023 ರಲ್ಲಿ ನಮೂದಿಸಿರುವ ಸ್ವತ್ತುಗಳು ಯಾವುದೇ ಬೆಲೆ ಬಾಳದ ವಸ್ತುವಾದ್ದರಿಂದ ಅವುಗಳನ್ನು ಅಪೀಲು ಅವಧಿ ಮುಗಿದ ಬಳಿಕ ನಾಶಪಡಿಸಲು ಆದೇಶಿಸಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ಕೊಟ್ಟು, ನೇರವಾಗಿ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿದ ನಂತರ, ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 28.02.2026 ರಂದು ಘೋಷಿಸಲಾಯಿತು)

( ಕೆ.ಲಕ್ಷ್ಮಿ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ. ಮಂಡ್ಯ

## ಅನುಬಂಧ

ಅಭಿಯೋಜನೆಯವರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:-

ಪ್ರಾಸಾ.1 : ಸುನಿಲ್ ಕುಮಾರ್.

ಅಭಿಯೋಜನೆಯವರ ಪರ ಗುರುತಿಸಿಕೊಂಡಿರುವ ದಾಖಲೆಗಳು:-

ನಿಪಿ.1 : ದೂರು
ನಿಪಿ.2 : ಮಹಜರ್
ನಿಪಿ.1(ಎ) ಮತ್ತು
ನಿಪಿ.2(ಎ) : ಪ್ರಾಸಾ.1 ರವರ ಸಹಿಗಳು.

<u>ಆಪಾದಿತರ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು:-</u>

- ಇಲ್ಲ -

<u>ಆಪಾದಿತರ ಪರ ಗುರುತಿಸಿಕೊಂಡಿರುವ ದಾಖಲೆಗಳು:-</u>

- ಇಲ್ಲ -

<u>ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು:-</u>

- ಇಲ್ಲ -

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ. ಮಂಡ್ಯ